**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂ:10007/2023**

**ಚಾಸಾ : 3**

**ಪ್ರಾಸಾ : 6**

**ಹೆಸರು** : ಮರಿಯಪ್ಪ
**ತಂದೆಯ ಹೆಸರು** : ಮುನಿಶಾಮಪ್ಪ
**ವಯಸ್ಸು** : 75 ವರ್ಷ
**ವೃತ್ತಿ** : ವ್ಯವಸಾಯ
**ವಾಸ** : ಶಾನುಭೋಗನಹಳ್ಳಿ ಗ್ರಾಮ, ಯಲಹಂಕ ತಾಲ್ಲೂಕ್

**ಈ ದಿನ ದಿನಾಂಕ: 13-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ :**

**1.** ನಾನು ದನ ಕುರಿಗಳನ್ನು ಮೇಯಿಸಿಕೊಂಡು ಇರುತ್ತೇನೆ. ಚಾಸಾ 2 ಹನುಮಕ್ಕನವರು ನಮ್ಮ ಊರಿನವರು ಇರುತ್ತಾರೆ ಅವರ ಜಮಿನಿನ ಹತ್ತಿರವೇ ನಾನು ನಮ್ಮ ದನ ಕುರಿಗಳನ್ನು ಮೇಯಿಸುತ್ತೇನೆ ನನಗೂ ಸಹ ಜಮಿನು ಇರುತ್ತದೆ. ಹನುಮಕ್ಕಳಿಗೆ 9 ಜನ ಮಕ್ಕಳಿರುತ್ತಾರೆ. ಚಾಸಾ 4 ಸುಶೀಲಮ್ಮ ಹನುಮಕ್ಕಳ ಮೂರನೇ ಮಗನ ಹೆಂಡತಿ ಇರುತ್ತಾಳೆ. ಅವರಿಗೆ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಅವರಲ್ಲಿ ಕೊಲೆಯಾಗಿರುವ ಒಬ್ಬಳು ರಾಶೀ ಇರುತ್ತಾಳೆ. ದೊಡ್ಡವಳ ಹೆಸರು ಗೊತ್ತಿರುವುದಿಲ್ಲ. ಸುಮಾರು ಒಂದೂವರೆ ವರ್ಷದ ಹಿಂದೆ ಕುರಿ ದನಗಳನ್ನು ಮೇಯಿಸಲು ಹನುಮಕ್ಕನವರ ಜಮಿನಿನ ಬಳಿ ಹೋಗಿದ್ದೆನು. ಅವರೂ ಸಹ ಅವರ ಜಮೀನಿನಲ್ಲಿ ಕುರಿ ದನಗಳನ್ನು ಮೇಯಿಸಲು ಬಂದಿದ್ದರು. ಆದಿನ ಮದ್ಯಾಹ್ನ 03.00 ರಿಂದ 03.30 ಗಂಟೆ ಸಮಯದಲ್ಲಿ ಕಿರುಚಾಡುವ ಶಬ್ದ ಕೇಳಿಸಿತು. ಯಾರೂ ಕಿರುಚಾಡುತ್ತಿದ್ದಾರೆಂದು ನಾನು ಮತ್ತು ಹನುಮಕ್ಕಳು ಮಾತನಾಡಿಕೊಂಡು ಕಿರುಚಾಡುತ್ತಿದ್ದ ಸ್ಥಳಕ್ಕೆ ಹೋದೆವು. ಅಷ್ಟರಲ್ಲಿ ಇಂದು ನ್ಯಾಯಾಲಯದಲ್ಲಿ ಇರುವ ಆರೋಪಿ ಚಾಕುವಿನಿಂದ ರಾಶಿಗೆ ಚುಚ್ಚುತ್ತಿದ್ದನು. ಕುತ್ತಿಗೆ ಮತ್ತು ಬೆನ್ನಿಗೆ ಚುಚ್ಚಿರುತ್ತಾನೆ. ನಾವು ಕೂಗಾಡಿಕೊಂಡು ಹೋಗುತ್ತಿದ್ದುದನ್ನು ನೋಡಿ ಆರೋಪಿ ಓಡಿ ಹೋಗಿರುತ್ತಾನೆ. ರಾಶಿ ಬಿದ್ದು ಹೋಗಿ ಪ್ರಾಣ ಹೋಗಿರುತ್ತದೆ.

**2.** ಊರಿನಲ್ಲಿ ತಿಳಿಸಿ ಬರುವಂತೆ ಹನುಮಕ್ಕಳನ್ನು ನಾನು ಕಳುಹಿಸಿರುತ್ತೇನೆ. ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಅದಕ್ಕೆ ಈಗಾಗಲೇ ಮು.ಮಾಲು 9 ಎಂದು ಗುರುತಿಸಲಾಗಿರುತ್ತದೆ. ಆರೋಪಿಯು ಘಟನೆಯ ಹಿಂದೆ ಚೇಪೆಕಾಯಿ ತುಂಬಿಕೊಂಡು ಹೋಗಲು ವಾಹನದ ಚಾಲಕ ಆಗಿದ್ದನು ಎಂದು ತಿಳಿದು ಬಂದಿರುತ್ತದೆ.

**3.** ರಾಶೀ ಮತ್ತು ಅವರ ಅಕ್ಕ ಮತ್ತು ಅವರ ತಾಯಿಯು ಚೇಪೆ ಕಾಯಿ ಕೀಳುವ ಕೂಲಿ ಕೆಲಸಕ್ಕೆ ಹೋಗುತ್ತಿದ್ದಾಗ ಆರೋಪಿ ಪರಿಚಯ ಆಗಿರುತ್ತಾನೆ ಎಂಬ ಮಾಹಿತಿ ಗೊತ್ತಾಗಿರುತ್ತದೆ.

**4.** ಆಮೇಲೆ ಆರೋಪಿ ತನ್ನನ್ನು ಪ್ರೀತಿಸುವಂತೆ ರಾಶಿಯನ್ನು ಕೇಳುತ್ತಿದ್ದನಂತೆ, ಆಗ ರಾಶಿಯು ನಿನಗೆ ಈಗಾಗಲೇ ಮದುವೆಯಾಗಿ ಮಗುವಿರುತ್ತದೆ ಆದ್ದರಿಂದ ಪ್ರೀತಿಸುವುದಿಲ್ಲವೆಂದು ಹೇಳುತ್ತಿದ್ದಳೆಂದು ಆದ್ದರಿಂದ ಕೊಲೆ

ಮಾಡಿರುತ್ತಾನೆಂದು ಗೊತ್ತಾಯಿತು. ಮೇಲೆ ಹೇಳಿದ ವಿಚಾರವನ್ನು ವಿಚಾರಣೆಯ ಸಮಯದಲ್ಲಿ ಪೋಲಿಸರಲ್ಲಿ ಹೇಳಿರುತ್ತೇನೆ.

5. ಆದಿನ ರಾಶಿಯು ಹಸುವಿಗೆ ಮೇವು ತರಲು ಕುಡುಗೋಲು ತಂದಿದ್ದಳು. ಆದಿನ ಸದರಿ ಕುಡುಗೋಲು ರಾಶಿಯವರು ಕೈಯಲ್ಲಿತ್ತು. ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ಮು. ಮಾಲು 10 ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ವಕೀಲರನ್ನು ಕರೆಯಲಾಯಿತು ಗೈರು ಹಾಜರಿರುತ್ತಾರೆ ಯಾರೂ ಪ್ರತಿನಿಧಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲವೆಂದು ಪರಿಗಣಿಸಲಾಯಿತು.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ